**C**

**CCE PF**
**CCE PR**
**NSR & NSPR**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESHWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2022**

**S.S.L.C. EXAMINATION, MARCH / APRIL, 2022**

# ಮಾದರಿ ಉತ್ತರಗಳು

# MODEL ANSWERS

ದಿನಾಂಕ : 08. 04. 2022 ] **ಸಂಕೇತ ಸಂಖ್ಯೆ : 62-K**

Date : 08. 04. 2022 ] **CODE NO. : 62-K**

## ವಿಷಯ : ತೃತೀಯ ಭಾಷೆ — ಕನ್ನಡ

## Subject : Third Language — KANNADA

**(ಖಾಸಗಿ ಅಭ್ಯರ್ಥಿ & ಪುನರಾವರ್ತಿತ ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh & Private Repeater / NSR & NSPR)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| I. | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 10 × 1 = 10 |
| 1. | ಇವುಗಳಲ್ಲಿ ಸಜಾತೀಯ ಸಂಯುಕ್ತಾಕ್ಷರದಿಂದ ಕೂಡಿರುವ ಪದ<br>(ಎ) ಅಕ್ಷರ (ಬಿ) ಪುಸ್ತಕ<br>(ಸಿ) ಅಕ್ಕ (ಡಿ) ಶಸ್ತ್ರ<br>***ಉತ್ತರ :*** (ಸಿ) ಅಕ್ಕ | |
| 2. | ಕೆಳಗಿನವುಗಳಲ್ಲಿ ಗುಣ ಸಂಧಿಗೆ ಉದಾಹರಣೆ<br>(ಎ) ಮಹಾತ್ಮ (ಬಿ) ನವೋದಯ<br>(ಸಿ) ಜಾತ್ಯತೀತ (ಡಿ) ಪರಿಜ್ಞಾನವನ್ನು<br>***ಉತ್ತರ :*** (ಬಿ) ನವೋದಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 3. | ಬರವಣಿಗೆಯಲ್ಲಿ ಇನ್ನೊಬ್ಬರ ಹೇಳಿಕೆಯನ್ನು ಯಥಾವತ್ತಾಗಿ ತಿಳಿಸಲು ಬಳಸುವ ಲೇಖನ ಚಿಹ್ನೆ<br>(ಎ) ಉದ್ಧರಣ ಚಿಹ್ನೆ (ಬಿ) ಆವರಣ ಚಿಹ್ನೆ<br>(ಸಿ) ಅರ್ಧವಿರಾಮ (ಡಿ) ಅಲ್ಪವಿರಾಮ<br>***ಉತ್ತರ :*** (ಎ) ಉದ್ಧರಣ ಚಿಹ್ನೆ | |
| 4. | 'ಪದುಮ' – ಇದರ ತತ್ಸಮ ರೂಪ<br>(ಎ) ಪದ (ಬಿ) ಪಮ್ಮ<br>(ಸಿ) ಪದ್ಮ (ಡಿ) ದಮ್ಮ<br>***ಉತ್ತರ :*** (ಸಿ) ಪದ್ಮ | |
| 5. | ಇವುಗಳಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಬಂದು ಬಳಕೆಯಾಗುತ್ತಿರುವ ಪದ<br>(ಎ) ಭೂಮಿ (ಬಿ) ಕಚೇರಿ<br>(ಸಿ) ಮೇಜು (ಡಿ) ಪೊಲೀಸ್<br>***ಉತ್ತರ :*** (ಡಿ) ಪೊಲೀಸ್ | |
| 6. | 'ಅಂಗೈ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ದ್ವಿಗು ಸಮಾಸ (ಬಿ) ಅಂಶಿ ಸಮಾಸ<br>(ಸಿ) ಕ್ರಿಯಾ ಸಮಾಸ (ಡಿ) ದ್ವಂದ್ವ ಸಮಾಸ<br>***ಉತ್ತರ :*** (ಬಿ) ಅಂಶಿ ಸಮಾಸ | |
| 7. | 'ಅಂತರಂಗ' – ಇದರ ವಿರುದ್ಧಾರ್ಥಕ ಪದ<br>(ಎ) ಬಹಿರಂಗ (ಬಿ) ತರಂಗ<br>(ಸಿ) ರಂಗ (ಡಿ) ನಿರಂತರಂಗ<br>***ಉತ್ತರ :*** (ಎ) ಬಹಿರಂಗ | |
| 8. | 'ಗೌರಮ್ಮನವರು ಮಡಿಕೇರಿಯ ಸುಂದರ ವಾತಾವರಣದಲ್ಲಿ ಬೆಳೆದರು' – ಇಲ್ಲಿ ಸಪ್ತಮೀ ವಿಭಕ್ತಿ ಪ್ರತ್ಯಯ ಇರುವ ಪದ<br>(ಎ) ಗೌರಮ್ಮನವರು (ಬಿ) ಮಡಿಕೇರಿಯ<br>(ಸಿ) ವಾತಾವರಣದಲ್ಲಿ (ಡಿ) ಬೆಳೆದರು<br>***ಉತ್ತರ :*** (ಸಿ) ವಾತಾವರಣದಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 9. | 'ಹುಡುಗಿ' ಇದರ ಬಹುವಚನ ರೂಪ<br>(ಎ) ಹುಡುಗಿಯು (ಬಿ) ಹುಡುಗಿಯಂದಿರು<br>(ಸಿ) ಬಾಲಕಿಯರು (ಡಿ) ಹುಡುಗಿಯರು<br>**ಉತ್ತರ :** (ಡಿ) ಹುಡುಗಿಯರು | |
| 10. | ಇವುಗಳಲ್ಲಿ ಪ್ರಶ್ನಾರ್ಥಕ ಸರ್ವನಾಮ<br>(ಎ) ನಾನು (ಬಿ) ಏನು<br>(ಸಿ) ನೀನು (ಡಿ) ತಾನು<br>**ಉತ್ತರ :** (ಬಿ) ಏನು | |
| II. | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | 5 × 1 = 5 |
| 11. | ತಿರುಮಲಾಂಬ : ನಂಜನಗೂಡು :: ಆರ್. ಕಲ್ಯಾಣಮ್ಮ : ......................... .<br>**ಉತ್ತರ :** ಬೆಂಗಳೂರು | |
| 12. | ಡಿ.ಎಸ್.ಪಿ. : ಬ್ರಿಟಿಷ್ ಪೊಲೀಸ್ ಅಧಿಕಾರಿ :: ಕುಲಕರ್ಣಿ : ......................... .<br>**ಉತ್ತರ :** ಭಾರತೀಯ ಅಧಿಕಾರಿ | |
| 13. | ಸ್ವರ್ಗ : ಆಚಾರ :: ನರಕ : ......................... .<br>**ಉತ್ತರ :** ಅನಾಚಾರ | |
| 14. | ಕರದಲಿ : ಜಪಮಣಿ :: ಬಾಯಲಿ : ......................... .<br>**ಉತ್ತರ :** ಮಂತ್ರವು | |
| 15. | ಶರೀಫರ ತಂದೆ : ಹಜರತ ಇಮಾಮ :: ಶರೀಫರ ತಾಯಿ : ......................... .<br>**ಉತ್ತರ :** ಹಾಜುಮ್ | |
| III. | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | 5 × 1 = 5 |
| 16 | ಕೊಡಗಿನ ಗೌರಮ್ಮನವರು ಅಕಾಲಿಕ ಮರಣ ಹೊಂದಿದ್ದು ಹೇಗೆ ?<br>**ಉತ್ತರ :**<br>ಕೊಡಗಿನ ಗೌರಮ್ಮನವರು ಹಟ್ಟಿಹೊಳೆಯಲ್ಲಿ ಈಜಾಡುವಾಗ ಸುಳಿಗೆ ಸಿಕ್ಕಿ ಅಕಾಲ ಮರಣ ಹೊಂದಿದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 17. | 'ಉದರ ವೈರಾಗ್ಯ' ಎಂದರೇನು ?<br>**ಉತ್ತರ :**<br>ಹೊಟ್ಟೆಪಾಡಿಗಾಗಿ ಹಾಕುವ ವೈರಾಗ್ಯದ ಸೋಗನ್ನು 'ಉದರ ವೈರಾಗ್ಯ' ಎನ್ನುವರು. | |
| 18. | ಯೋಗಿಯಾದವನು ಏನನ್ನು ಜಯಿಸಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ ?<br>**ಉತ್ತರ :**<br>ಯೋಗಿಯಾದವನು ಅರಿಷಡ್ವರ್ಗ (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ)ಗಳನ್ನು ಜಯಿಸಬೇಕೆಂದು ಸೋಮೇಶ್ವರ ಶತಕದಲ್ಲಿ ಹೇಳಿದೆ. | |
| 19. | ಪುಲಿಗೆರೆ ಸೋಮನಾಥನ ಅಂಕಿತನಾಮ ಯಾವುದು ?<br>**ಉತ್ತರ :**<br>ಪುಲಿಗೆರೆ ಸೋಮನಾಥನ ಅಂಕಿತನಾಮ 'ಹರಹರಾ ಶ್ರೀ ಚೆನ್ನಸೋಮೇಶ್ವರಾ.' | |
| 20. | ಮೋಹನಪುರದಲ್ಲಿ ನಡೆದ ಚಳುವಳಿ ಯಾವುದು ?<br>**ಉತ್ತರ :**<br>ಮೋಹನಪುರದಲ್ಲಿ ನಡೆದ ಚಳುವಳಿ 'ಚಲೇಜಾವ್ ಚಳುವಳಿ.' | |
| IV. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | $10 \times 2 = 20$ |
| 21. | ಪೊಲೀಸರು ಗೊರೂರರನ್ನು ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದ್ದೇಕೆ ?<br>**ಉತ್ತರ :**<br>ಪೊಲೀಸಿನವರ ಮನೆಯ ಹಾಸಿಗೆಯು ಅನೇಕ ದಿನಗಳಿಂದ ಉಪಯೋಗಿಸದೆ ಇರುವುದರಿಂದ ಧೂಳು ತುಂಬಿತ್ತು. ಅದರಲ್ಲಿ ಲೇಖಕರನ್ನು ಮಲಗಿಸಲು ಪೊಲೀಸಿನವರಿಗೆ ಇಷ್ಟವಿರಲಿಲ್ಲ. ಅಲ್ಲದೆ ಅವರ ವಶದಲ್ಲೇ ಗಾಳಿ, ಬೆಳಕು, ಸ್ವಚ್ಛವಾದ ಹಾಸಿಗೆ, ವಾರಕ್ಕೆರಡು ಸಲ ಕ್ರಿಮಿನಾಶಕ ಸಾರಣೆಗಳಿಂದ ಶುದ್ಧವಾದ ಲಾಕಪ್ ಇದ್ದಿತ್ತು. ಆದುದರಿಂದ ಪೊಲೀಸರು ಗೊರೂರರನ್ನು ಆ ಲಾಕಪ್ಪಿನಲ್ಲಿ ಮಲಗಿಸಲು ಯೋಚಿಸಿದ್ದರು. | |
| 22. | ಗಾಂಧೀಜಿಯವರು ಅವಾಕ್ಕಾಗಲು ಕಾರಣವೇನು ?<br>**ಉತ್ತರ :**<br>ಗಾಂಧೀಜಿಯವರು ಗೌರಮ್ಮನವರಿಗೆ ಕೊಟ್ಟ ಮಾತಿನಂತೆ ಅವರ ಮನೆಗೆ ಬಂದರು. ಆಗ ಗೌರಮ್ಮನವರು ಗಾಂಧೀಜಿಯವರ ಸ್ವಾತಂತ್ರ್ಯ ಸಂಗ್ರಾಮ ಮತ್ತು ಹರಿಜನೋದ್ಧಾರ ಸಂಬಂಧ ನಿಧಿಗೆ, ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ ಹಾಗೂ ಮೂಗುಬೊಟ್ಟಿನ ಹೊರತಾಗಿ ಉಳಿದೆಲ್ಲಾ ಒಡವೆಗಳನ್ನು ಮಹಾತ್ಮರ ಕೈಗೆ ಕೊಟ್ಟಾಗ ಅವರು ಅವಕ್ಕಾದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 23. | "ಅರಿಯದ ಬಾಲಕರನ್ನು ಅಡ್ಡದಾರಿಗೆ ಎಳೆದು ಅವರ ಬದುಕನ್ನು ಹಾಳು ಮಾಡಿದಿರಿ" ಎಂದು ಕುಲಕರ್ಣಿಯು ಸೋಮಣ್ಣನಿಗೆ ಹೇಳಿದ ಸನ್ನಿವೇಶವನ್ನು ವಿವರಿಸಿ. | |
| | ***ಉತ್ತರ :*** | |
| | ರಾಮ್‌ಸಿಂಗ್‌ನನ್ನು ಕುಲಕರ್ಣಿಯು ಗುಂಡುಹಾರಿಸಿ ಕೊಂದಿರುವುದನ್ನು ಸೋಮಣ್ಣನು ಬಲವಾಗಿ ಆಕ್ಷೇಪಿಸುತ್ತಾನೆ. "ನಮ್ಮ ಆಜ್ಞೆ ಮೀರಿದ್ದಕ್ಕೆ ಈ ಫಲ ಅವನಿಗೆ" ಎಂದು ಕುಲಕರ್ಣಿ ಉತ್ತರಿಸುತ್ತಾನೆ. ಅದಕ್ಕೆ ಸೋಮಣ್ಣನು ಕೋಪದಿಂದ, "ಪಾರತಂತ್ರ್ಯದ ಕೆಸರಿನಲ್ಲಿಯೇ ಕೊಳೆಯುತ್ತಲಿರಿ ಎಂಬ ನೀವಿತ್ತ ಆಜ್ಞೆಯೇ ಹಿತಕರವಲ್ಲ; ಅದು ಉನ್ಮತ್ತ ಗುಲಾಮರ ಉಪದ್ವ್ಯಾಪ, ದಾನವನ ದರ್ಪ, ದಾಸ್ಯದ ದ್ಯೋತಕ" ಎಂದನು. ಆಗ ಅಧಿಕಾರದ ದರ್ಪದಿಂದ ಕುಲಕರ್ಣಿಯು ಸೋಮಣ್ಣನಿಗೆ "ಅರಿಯದ ಬಾಲಕರನ್ನು ಅಡ್ಡದಾರಿಗೆ ಎಳೆದು, ಅವರ ಬದುಕನ್ನು ಹಾಳು ಮಾಡಿದಿರಿ" ಎಂದನು. | |
| 24. | ಕೆಳದಿ ಚೆನ್ನಮ್ಮನು ಯುದ್ಧವನ್ನೇ ಮಾಡದೆ ಬಲಾಢ್ಯ ಮೊಗಲರ ಸೈನ್ಯವನ್ನು ಹೇಗೆ ಸೋಲಿಸಿದಳು ? | |
| | ***ಉತ್ತರ :*** | |
| | ಚಾಣಾಕ್ಷಳಾದ ಚೆನ್ನಮ್ಮಾಜಿ ತನ್ನ ರಾಜಧಾನಿಯನ್ನು ಭುವನಗಿರಿಗೆ ಸ್ಥಳಾಂತರಿಸಿ ಸುತ್ತಲಿನ ಬೆಟ್ಟ, ಕಣಿವೆ, ಇಕ್ಕಟ್ಟು ದಾರಿ, ಕಾಲುದಾರಿ, ಕಳ್ಳದಾರಿಗಳಲ್ಲಿ ತನ್ನ ಸೈನಿಕರನ್ನು ನಿಲ್ಲಿಸಿ, ಮೊಘಲ್ ಸೇನೆಗೆ ಅನ್ನ, ನೀರು ಸಿಗದಂತೆ ಮಾಡಿದಳು. ದಟ್ಟವಾದ ಕಾಡುಗಳ ಸಂದುಗೊಂದುಗಳಲ್ಲಿ ಚಲಿಸಲು ಆಗದೆ, ಮಲೆನಾಡಿನ ಮಳೆಗೆ ತತ್ತರಿಸಿ, ಪ್ರಾಣಭೀತಿಯಿಂದ ಮೊಘಲ್ ಸೈನ್ಯವು ಪಲಾಯನ ಮಾಡಿತು. ಈ ರೀತಿಯಾಗಿ ಕೆಳದಿ ಚೆನ್ನಮ್ಮನು ಯುದ್ಧವನ್ನೇ ಮಾಡದೆ, ಬಲಾಢ್ಯ ಮೊಘಲರ ಸೈನ್ಯವನ್ನು ಸೋಲಿಸಿದಳು. | |
| 25. | ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟವು 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ಅಭಿವ್ಯಕ್ತಿಗೊಂಡಿದೆ ? | |
| | ***ಉತ್ತರ :*** | |
| | ಶೋಷಣೆಯನ್ನು ವಿರೋಧಿಸುವವರು ಕ್ರಾಂತಿಯೆಂಬ ಕೆಂಡದಂತೆ ಸುಡುವ ಕುಂಡವನ್ನು ಹೊರಬೇಕು. ನಡೆಯುವಾಗ ದಾರಿಯ ತುಂಬ ಮುಳ್ಳುಗಳು ಚುಚ್ಚುತ್ತಿರುತ್ತವೆ. ಪರಿಣಾಮವಾಗಿ ಕಾಲುಗಳಿಂದ ರಕ್ತಚಿಮ್ಮುತ್ತಿದ್ದರೂ ಇತರರನ್ನು ಬಡಿದೆಬ್ಬಿಸಲು ಹಾಡನ್ನು ಬರೆಯುತ್ತಾರೆ ಎಂದು 'ಕಟ್ಟತೇವ ನಾವು' ಕವಿತೆಯಲ್ಲಿ ಶೋಷಣೆಯನ್ನು ವಿರೋಧಿಸುವವರ ಕಷ್ಟವು ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 26. | ಬೆಳಕಿನ ಸತ್ವ ಮತ್ತು ರಸಕವಿತ್ವ ಒಂದೇ ಎನ್ನುವುದಕ್ಕೆ ನಿಸಾರ್ ಅಹಮದ್‌ರವರು ನೀಡಿರುವ ನಿದರ್ಶನಗಳನ್ನು ಸಮರ್ಥಿಸಿ.<br>***ಉತ್ತರ :***<br>ಬಾಣ, ಬಿರುಸು, ಕುಂಡ, ಹಣತೆ ಇವುಗಳಲ್ಲಿ ಬೆಳಕು ಬೇರೆ ಬೇರೆ ಸ್ವರೂಪದಿಂದ ಕಂಡುಬರುತ್ತದೆ. ಆದರೆ ಆ ಬೆಳಕಿನ ಸತ್ವ ಒಂದೇ ಆಗಿದೆ. ಕಂದ, ವೃತ್ತ, ತ್ರಿಪದಿ, ವಚನ ಮುಂತಾದ ಛಂದಃ ಪ್ರಕಾರಗಳಲ್ಲಿ ಕವಿಯ ರಚನೆಯಲ್ಲಿ ವೈವಿಧ್ಯವು ಕಂಡುಬರುತ್ತದೆ. ಆದರೆ ಹಿಂದಿನ ರಸವತ್ತಾದ ಕವಿತ್ವ ಶಕ್ತಿಯು ಒಂದೇ ಆಗಿರುತ್ತದೆ ಎಂದು ಕವಿ ನಿಸಾರ್ ಅಹಮದ್ ಅವರು ನಿದರ್ಶನಗಳನ್ನು ನೀಡಿದ್ದಾರೆ. | |
| 27. | ದನಕರುಗಳು ಹೇಗಾಗಿವೆ ಎಂದು ರೈತನು ಮಳೆರಾಯನಲ್ಲಿ ನಿವೇದಿಸುತ್ತಾನೆ ?<br>***ಉತ್ತರ :***<br>ಮಳೆಬಾರದಿದ್ದಾಗ ರೈತನು ದೇವರಲ್ಲಿ ಮೊರೆಯಿಡುವ ರೀತಿಯು ಮನಕಲಕುತ್ತದೆ. "ವರುಣರಾಯನ ಕೃಪೆಯಿಲ್ಲದೆ ಭೂಮಿ ಒಣಗಿದೆ. ಆದರಿಂದ ಆಹಾರವಿಲ್ಲದೆ ದನಕರುಗಳು ಸೊರಗಿಹೋಗಿವೆ. ಹೇ ಮಳೆರಾಯ, ನೀನು ಬೇಗ ಮಳೆ ಸುರಿಸು; ದನಕರುಗಳನ್ನು ಹಾಗೂ ನಮ್ಮನ್ನು ಕಾಪಾಡು" ಎಂದು ನಿವೇದಿಸಿಕೊಳ್ಳುತ್ತಾನೆ. | |
| 28. | ವಿಶು ಜ್ಞಾನತಪ್ಪಿ ಏಕೆ ಕೆಳಗುರುಳಿದನು ?<br>***ಉತ್ತರ :***<br>ಧರ್ಮಪದನು ಕಲಶವನ್ನು ಕೂಡಿಸಿದಾಗ ವಿಶುವು "ತನ್ನ ಪ್ರತಿಭೆಗೆ ಮುಳ್ಳಾಗಿ ಇವನು ಎಲ್ಲಿಂದ ಬಂದ. ಈಗಿವನು ಮಹಾರಾಜನಿಂದ ಬಿರುದು ಬಾವಲಿಗಳನ್ನು ತನ್ನಿದಿರೇ ಪಡೆಯುತ್ತಾನೆ. ತಾನೀಗ ಕೈಕೆಳಗೆ ಕೆಲಸ ಮಾಡುತ್ತಿದ್ದ ಇತರ ಶಿಲ್ಪಿಗಳ ಮುಂದೆ ಅವಮಾನಿತನಾಗಿದ್ದೇನೆ" ಎಂದು ಯೋಚಿಸುತ್ತ ಉದ್ವೇಗಕ್ಕೊಳಗಾಗಿ ಜ್ಞಾನತಪ್ಪಿ ಕೆಳಗುರುಳಿದನು. | |
| 29. | ಕೊಡಗಿನ ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳಾವುವು ?<br>***ಉತ್ತರ :***<br>ಕೊಡಗಿನ ಗೌರಮ್ಮನವರು ಬದುಕಿನಲ್ಲಿ ಕಂಡು ಕೇಳಿದ ಘಟನೆಗಳು ಮತ್ತು ಅವುಗಳ ಅನುಭವದ ಹಿನ್ನೆಲೆಯಲ್ಲಿ ಮಹಿಳಾಲೋಕದ ಕನಸುಗಳ, ಆದರ್ಶಗಳ ಚಿತ್ರಣವನ್ನು ತಮ್ಮ ಕಥೆಗಳಲ್ಲಿ ನೀಡಲು ಪ್ರಯತ್ನಿಸಿದರು. ಗೌರಮ್ಮನವರ ಇಪ್ಪತ್ತೊಂದು ಕಥೆಗಳಲ್ಲಿಯೂ ಎಲ್ಲ ಮಾನವ ಜೀವಿಗಳ ಸ್ವಾತಂತ್ರ್ಯ ಸದಭಿರುಚಿ ಹಾಗೂ ಮನದಾಳದ ಅನಿಸಿಕೆಗಳಿಗೆ ಪೂರಕವಾಗಿ ನಿಲ್ಲಬಲ್ಲ ಹೊಸ ಸಮಾಜವೊಂದರ ನಿರ್ಮಾಣದ ಶಕ್ತಿಯಿರುವುದು ಪ್ರತಿಬಿಂಬಿತವಾಗಿದೆ. ಇವು ಗೌರಮ್ಮನವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ವಿಚಾರಗಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 30. | ಯಾವ ಯಾವ ಸಾಮರ್ಥ್ಯದಿಂದ ಯಾವ ಯಾವ ಕಾರ್ಯಗಳನ್ನು ಮಾಡಬೇಕೆಂದು ಪುಲಿಗೆರೆ ಸೋಮನಾಥನು ಹೇಳಿದ್ದಾನೆ ? | |
| | ***ಉತ್ತರ :*** | |
| | ಪುಲಿಗೆರೆ ಸೋಮನಾಥನು ಹೇಳಿದಂತೆ ಯುದ್ಧ ಮಾಡಲು ಬಲ್ಲವನೇ ಭಟನಾಗಬೇಕು; ನಾನಾ ವಿಧದ ಚಮತ್ಕಾರಗಳನ್ನು ಬಲ್ಲವನೇ ಮಂತ್ರಿಯಾಗಬೇಕು; ಯಾರು ಏನೆಂದರೂ ಕೋಪಿಸಿಕೊಳ್ಳದೆ ತಾಳ್ಮೆಯಿಂದ ಇರುವವನೇ ದೊರೆಯಾಗಬೇಕು; ಅರಿಷಡ್ವರ್ಗಗಳನ್ನು ಗೆಲ್ಲುವ ಸಾಮರ್ಥ್ಯವುಳ್ಳವನೇ ಯೋಗಿಯಾಗಬೇಕು; ತನ್ನ ಕೈಯಿಂದ ದಂಡ ತೆರುವ ಸಾಮರ್ಥ್ಯವಿರುವವನು ಮಾತ್ರ ಮತ್ತೊಬ್ಬರು ಮಾಡುವ ಸಾಲಕ್ಕೆ ಹೊಣೆಯಾಗಬೇಕು. ಹೀಗೆ ಅಯಾಯಾ ಸಾಮರ್ಥ್ಯದಿಂದ ಆಯಾ ಕಾರ್ಯಗಳನ್ನು ಮಾಡಬೇಕು. | |
| V. | **ಸಂದರ್ಭಸಹಿತ ವಿವರಣೆ :** | 4 × 3 = 12 |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು-ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ಸಾಕು ಮಾಡಿರಿ ನಿಮ್ಮ ಪುರಾಣ." | |
| | ***ಉತ್ತರ :*** | |
| | ಈ ಮಾತನ್ನು 'ಪ್ರೊ॥ ಎಸ್. ಆರ್. ರೋಹಿಡೇಕರ್' ಅವರು ಬರೆದ 'ಮೂರು ಏಕಾಂಕ ನಾಟಕಗಳು' ಕೃತಿಯಿಂದ ಆಯ್ದು 'ಧ್ವಜರಕ್ಷಣೆ' ಪಾಠದಿಂದ ಆರಿಸಲಾಗಿದೆ. | |
| | ರಾಮ್‌ಸಿಂಗ್‌ನನ್ನು ಕಲಕರ್ಣಿಯು ಗುಂಡುಹಾರಿಸಿ ಕೊಂದಾಗ ಅಲ್ಲಿಗೆ ಬಂದ ಸೋಮಣ್ಣನು "ನಾವು ಸ್ವಾತಂತ್ರ್ಯಕ್ಕಾಗಿ ಹೋರಾಡಿ ಸತ್ತರೆ, ಮುಂದಿನ ಪೀಳಿಗೆಯುವರು ಅದರ ಫಲವನ್ನು ಸವಿಯುತ್ತಾರೆ. ನಮ್ಮ ಕರ್ತವ್ಯದಲ್ಲಿ ಚ್ಯುತಿಯಾದರೆ ನಾವು ನರಕಕ್ಕೆ ಹೋಗುವುದು ಖಂಡಿತ" ಎಂದು ಕುಲಕರ್ಣಿಯ ಜೊತೆ ವಾಗ್ವಾದಕ್ಕೆ ಇಳಿಯುತ್ತಾನೆ. ಸ್ವಾತಂತ್ರ್ಯ ಹೋರಾಟವನ್ನು ಸೋಮಣ್ಣನು ಸಮರ್ಥಿಸಿಕೊಂಡರೆ ಕುಲಕರ್ಣಿಯು ತನ್ನ ಕರ್ತವ್ಯ ನಿಷ್ಠೆ ಹಾಗೂ ಅಧಿಕಾರದ ಮದದಿಂದ ಮೇಲಿನ ಮಾತನ್ನು ಹೇಳಿದನು. | |
| | ಸೋಮಣ್ಣನ ತಿಳುವಳಿಕೆಯ ಮಾತನ್ನು ಕೇಳದ ಕುಲಕರ್ಣಿಯ ಅಹಂಕಾರದ ಸ್ವಭಾವವು ಎದ್ದು ಕಾಣುವ ಈ ಪ್ರಸಂಗವು ಇಲ್ಲಿ ಸ್ವಾರಸ್ಯಕರವಾಗಿದೆ. | |
| 32. | "ನಾನು ಎಂಬುದ ಬಿಟ್ಟು ಜ್ಞಾನಿಗಳೊಡನಾಡಿ." | |
| | ***ಉತ್ತರ :*** | |
| | ಈ ಸಾಲನ್ನು ಪುರಂದರದಾಸರ 'ಉದರ ವೈರಾಗ್ಯ' ಕೀರ್ತನೆಯಿಂದ ಆಯ್ದುಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಡಾಂಭಿಕ ಭಕ್ತಿಯನ್ನು ಅತಿಯಾಗಿ ತೋರಿಸುತ್ತಾ ಪ್ರತಿಮೆಗಳಿಗೆ ವಂಚನೆಯಿಂದ ಪೂಜೆ ಮಾಡುತ್ತ, ಮನದಲ್ಲಿ ಪರಸತಿಯನ್ನು ಸ್ಮರಿಸುತ್ತ, ಕೇವಲ ನಟನೆ ಮಾಡದೆ ಅಹಂಕಾರವನ್ನು ಬಿಡಬೇಕು. ಜ್ಞಾನಿಗಳ ಸಂಗ ಮಾಡಬೇಕು. ಏನೇ ಆದರೂ ಅದು ಪರಮಾತ್ಮನ ಪ್ರೇರಣೆಯೆಂದು ತಿಳಿದು ಮೌನದಿಂದ ಕರ್ತವ್ಯ ನಿರ್ವಹಿಸಬೇಕು ಎಂದು ಕೀರ್ತನೆಯ ಕೊನೆಯಲ್ಲಿ ಸಂದೇಶ ನೀಡುವಾಗ ಈ ಸಾಲನ್ನು ಬಳಸಲಾಗಿದೆ.<br>ತಿಳಿದೋ ತಿಳಿಯದೋ ಡಾಂಭಿಕ ಭಕ್ತಿ ಮಾಡಿದವನಿಗೆ ದಾಸರು ದಾರಿತೋರಿದ ರೀತಿಯು ಇಲ್ಲಿ ಸ್ವಾರಸ್ಯಕರವಾಗಿದೆ. | |
| 33. | "ಈಗ ನೀವು ನನ್ನ ವಶವಾದಿರಿ, ನಾನು ನಿಮ್ಮನ್ನು ಕೈ ಬಿಡುವಂತಿಲ್ಲ."<br>***ಉತ್ತರ :***<br>ಈ ಮಾತನ್ನು 'ಗೊರೂರು ರಾಮಸ್ವಾಮಿ ಅಯ್ಯಂಗಾರ್' ಅವರ 'ಅಮೆರಿಕಾದಲ್ಲಿ ಗೊರೂರು' ಕೃತಿಯಿಂದ ಆರಿಸಲಾದ 'ಲಾಕಪ್ಪಿನಲ್ಲಿ ಒಂದು ರಾತ್ರಿ' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಗೊರೂರರು ಮಿನಿ ಪೊಲೀಸ್ ನಗರದಲ್ಲಿ ದಾರಿತಪ್ಪಿ ಅಲೆಯುತ್ತಿದ್ದರು. ಆಗ ಕರ್ತವ್ಯಮುಗಿಸಿ ಮನೆಗೆ ತೆರಳುತ್ತಿದ್ದ ಪೊಲೀಸಿನವ ಅವರ ಕಣ್ಣಿಗೆ ಬಿದ್ದನು. ಅವನಲ್ಲಿ ತನ್ನೆಲ್ಲ ಸಮಸ್ಯೆಗಳನ್ನು ಹೇಳಿಕೊಂಡರು. ಲೇಖಕರ ಅಸಹಾಯಕತೆಯನ್ನು ಅರಿತ ಪೊಲೀಸನು ಅವರಿಗೆ ಸ್ಪಂದಿಸುತ್ತ ಈ ಮಾತನ್ನು ಹೇಳಿದನು.<br>ಅಮೆರಿಕಾದ ಪೊಲೀಸಿನವರ ಕರ್ತವ್ಯ ಪ್ರಜ್ಞೆ, ಸಹಾನುಭೂತಿ ಮತ್ತು ಪ್ರತಿಸ್ಪಂದನೆಗಳು ಇಲ್ಲಿ ಸ್ವಾರಸ್ಯವನ್ನು ಉಂಟುಮಾಡುತ್ತವೆ. | |
| 34. | "ಸ್ವಸ್ವಭಾವ ಚಹರೆ ಬೇರೆ ತಾಯ ಬಸಿರು ಒಂದೆ."<br>***ಉತ್ತರ :***<br>ಈ ಸಾಲವನ್ನು 'ಪ್ರೊ|| ಕೆ.ಎಸ್. ನಿಸಾರ್ ಅಹಮದ್ ಅವರ 'ಸಮಗ್ರ ಕವಿತೆಗಳು' ಕವನ ಸಂಕಲನದಿಂದ ಆರಿಸಲಾದ 'ಭೂಮಿ ತಾಯ ಕುಡಿಗಳು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>ನಮ್ಮೆಲ್ಲರ ಸ್ವಭಾವ ನಡೆ-ನುಡಿಗಳು ಬೇರೆ ಬೇರೆಯಾಗಿದ್ದರೂ ಈ ಭೂಮಿತಾಯ ಮಕ್ಕಳಾದ ನಾವೆಲ್ಲರೂ ಒಂದಾಗಿರಬೇಕು. ನಮ್ಮಲ್ಲಿ ಅನೇಕ ಧರ್ಮಗಳು ಇದ್ದರೂ ಆ ಎಲ್ಲ ಧರ್ಮಗಳ ಮೂಲಸತ್ತ್ವ ಒಂದೇ ಆಗಿರುತ್ತದೆ ಎಂದು ಬಣ್ಣಿಸುವಾಗ ಈ ಸಾಲು ಬಂದಿದೆ.<br>ನಾವೆಲ್ಲರೂ ಭೂಮಿತಾಯ ಮಕ್ಕಳು ಎಂಬುದನ್ನು ಕವಿಯು ಬಣ್ಣಿಸಿ ಸಮರ್ಥಿಸಿರುವ ರೀತಿಯು ಇಲ್ಲಿ ಸ್ವಾರಸ್ಯಕರವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| VI. | ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು : | 4 × 3 = 12 |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 35. | ಮಿನಿ ಪೊಲೀಸ್ ನಗರದಲ್ಲಿ ಎದುರಾದ ಸಮಸ್ಯೆಯಿಂದ ಗೊರೂರರು ಪಾರಾದುದು ಹೇಗೆ ? | |
| | ***ಉತ್ತರ :*** | |
| | ಮಿನಿ ಪೊಲೀಸ್ ನಗರದಲ್ಲಿ ದಾರಿತಪ್ಪಿ ಅಲೆಯುತ್ತಿರುವ ಗೊರೂರರ ಕಣ್ಣಿಗೆ ಒಬ್ಬ ಟ್ರಾಫಿಕ್ ಪೊಲೀಸಿನವ ಬಿದ್ದನು. ಆಗ ತಾನೇ ಅವನ ಕರ್ತವ್ಯ ಮುಗಿದಿತ್ತು. ಅವನಿಗೆ ತನ್ನ ಸಮಸ್ಯೆಯನ್ನು ವಿವರಿಸಿದರು. ದಾರಿತಪ್ಪಿರುವುದರಿಂದ ಮಿತ್ರನಿಗೆ ಇವರು ಸಿಕ್ಕಿಲ್ಲ ಎಂಬುದು ಅವನಿಗೆ ಅರ್ಥವಾಯಿತು. ಮಿತ್ರನ ವಿಳಾಸವಿದ್ದ ಅವರ ಕೈಚೀಲವೂ ಅವರ ಕಾರಿನಲ್ಲೇ ಉಳಿದಿತ್ತು. ಹೋಟೆಲಿನಲ್ಲಿ ಉಳಿದುಕೊಳ್ಳಲು ಒಂದು ರಾತ್ರಿಗೆ ೨೫ ಡಾಲರು ಹಣ ಲೇಖಕರಲ್ಲಿರಲಿಲ್ಲ. ಐದು ಡಾಲರಿನ ಹೋಟೆಲ್ ಕೊಠಡಿಗಳು ಖಾಲಿ ಇರಲಿಲ್ಲ. ಆಗ ಪೊಲೀಸಿನವನು "ಈಗ ನೀವು ನನ್ನ ವಶವಾದಿರಿ. ನಾನು ನಿಮ್ಮನ್ನು ಕೈಬಿಡುವಂತಿಲ್ಲ. ನನ್ನ ಮನೆಗೆ ಹೋಗೋಣ ನಡೆಯಿರಿ. ಇಲ್ಲಿಗೆ ಏಳು ಮೈಲಿ" ಎಂದು ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಅವರಿಗೆ ರಾತ್ರಿಯ ಊಟ ನೀಡಿ, ಸತ್ಕರಿಸಿ, ಮಲಗಲು ವ್ಯವಸ್ಥೆ ಮಾಡಿದನು. ಹೀಗೆ ಲೇಖಕರು ಎದುರಾದ ಸಮಸ್ಯೆದಿಂದ ಪಾರಾದರು. | |
| 36. | ಶರೀಫರ ತತ್ತ್ವಪದಗಳ ವೈಶಿಷ್ಟ್ಯವನ್ನು ವಿವರಿಸಿ. | |
| | ***ಉತ್ತರ :*** | |
| | ಜಾನಪದ ಪ್ರತಿನಿಧಿಯಾದ ಸಂತ ಕವಿ ಶರೀಫರು ಸಾಮಾನ್ಯ ಮಾನವನಿಗೂ ಅರ್ಥವಾಗುವಂತೆ ಮಾನವತೆಯ ತತ್ತ್ವಬೋಧನೆ ಮಾಡಿದ್ದಾರೆ. ತತ್ತ್ವವಿವೇಚನೆ, ಶಾಸ್ತ್ರಶ್ರವಣ ಮುಂತಾದವು ಕೇವಲ ಉಚ್ಚ ಜನರ ಸೊತ್ತೆಂಬ ಮೂಢ ತಿಳುವಳಿಕೆ ನಮ್ಮಲ್ಲುಂಟು. ಆದರೆ ಶರೀಫರು ಈ ಮಾತನ್ನು ಹುಸಿಯಾಗಿಸಿ ಧರ್ಮಪರಿಪಾಲನೆ ಮತ್ತು ತತ್ತ್ವಸೌರಭವನ್ನು ಪ್ರತಿಯೊಬ್ಬರೂ ಸವಿಯಲರ್ಹರೆಂಬುದನ್ನು ಸಾರಿದ್ದಾರೆ. ಅಂತೆಯೇ ಶರೀಫರ ತತ್ತ್ವಪದಗಳನ್ನು ವೇದಶಾಸ್ತ್ರಗಳನ್ನು ಅರಿಯದವರೂ ಗುನುಗುಡುತ್ತಿರುತ್ತಾರೆ. ಮನೆಮನೆಗೂ ಅಲೆದಾಡಿ ಜೀವಹೊರೆಯುವ ದಾಸಯ್ಯಗಳು, ಭಿಕ್ಷುಕರು ಇಂಥ ತತ್ತ್ವಪದಗಳನ್ನು ಹಾಡುತ್ತಾರೆ. ಶ್ರೀಸಾಮಾನ್ಯನು ತನ್ನ ಜೀವನವನ್ನು ಸಾಫಲ್ಯಗೊಳಿಸಿಕೊಳ್ಳುವ ರಹಸ್ಯವು ಈ ಹಾಡುಗಳಲ್ಲಿದೆ. ಅಲ್ಲದೆ ಇವುಗಳ ಗತಿಗತ್ತುಗಳು ಜನಮನವನ್ನು ಹಿಡಿಯುವಂಥವುಗಳಾಗಿವೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 37. | ಯಾವುದೇ ತಾರತಮ್ಯಗಳಿಲ್ಲದ ಸಮಾಜ ನಿರ್ಮಾಣದ ಆಶಯವು ಸತೀಶ ಕುಲಕರ್ಣಿಯವರ ಕವಿತೆಯಲ್ಲಿ ಹೇಗೆ ಅಂತರ್ಗತವಾಗಿದೆ ? ವಿವರಿಸಿ.<br>***ಉತ್ತರ :***<br>ಅಸಮಾನತೆ ಹಾಗೂ ಜಾತಿ ಪದ್ಧತಿಗಳು ದೇಶದ ಅತಿ ದೊಡ್ಡ ಸಮಸ್ಯೆಯಾಗಿ, ಸಮುದಾಯದ ಹಿತದ ದೃಷ್ಟಿಯಿಂದ ಚಿಂತನೆಗಳು ರೂಪುಗೊಂಡು ಹೋರಾಟದ ಹಾದಿಯನ್ನು ಹಿಡಿಯುವುದು ಅನಿವಾರ್ಯವಾಯಿತು. ಭರವಸೆಯ ಬೆಳಕನ್ನು ಹುರಿಗೊಳಿಸಿ, ಕಾಡುತ್ತಿದ್ದ ಮೌಢ್ಯವನ್ನು ತೊಲಗಿಸಲು, ಸಾಮಾಜಿಕ ಪ್ರಜ್ಞೆಯನ್ನು ಬೆಳೆಸಲು, ನಾಡಿನಾದ್ಯಂತ ಹೊಸ ಸಂಚಲನ ಶಕ್ತಿಯನ್ನು ಹೊರಹೊಮ್ಮಿಸಲು ಕ್ರಾಂತಿಗೀತೆಗಳು ಹುಟ್ಟಿಕೊಂಡವು. ಪ್ರಸ್ತುತ 'ಕಟ್ಟತೇವ ನಾವು' ಕವಿತೆಯಲ್ಲಿ ಕವಿಯು ಹೀಗೆ ಹೇಳುತ್ತಾನೆ. ಸಮಾಜದಲ್ಲಿ ಒಡೆದ ಮನಸ್ಸುಗಳನ್ನು ಕನಸು ಕಂಡವರನ್ನು ಒಗ್ಗೂಡಿಸುತ್ತೇವೆ. ಜಾತಿ, ಭೀತಿಗಳಿಲ್ಲದ ಜೀವನವನ್ನು ಕಟ್ಟುತ್ತೇವೆ. ಕುಲದ ಹೆಸರಿನಲ್ಲಿ ಬಡಿದಾಡದ ಮನುಕುಲವನ್ನು ಕಟ್ಟೇ ಕಟ್ಟುತ್ತೇವೆ ಎಂದಿದ್ದಾರೆ. ತಾನು ಕಟ್ಟುವ ನಾಡಿನಲ್ಲಿ ದುಃಖ, ಕ್ರೂರತೆಗಳಿಲ್ಲ. ಕೋಟಿ ಕನಸುಗಳನ್ನು ಕಾಣುವ ನೂರಾರು ಮನಸ್ಸುಗಳುಳ್ಳ ಹಾಡನ್ನು ಕಟ್ಟಿ, ನಾಡನ್ನೂ ಕಟ್ಟುತ್ತೇವೆ ಎಂದಿದ್ದಾರೆ. ಹೀಗೆ ಯಾವುದೇ ತಾರತಮ್ಯಗಳಿಲ್ಲದ ಸಮಾಜ ನಿರ್ಮಾಣದ ಆಶಯವು ಸತೀಶ ಕುಲಕರ್ಣಿಯವರ ಕವಿತೆಯಲ್ಲಿ ಅಂತರ್ಗತವಾಗಿದೆ. | |
| 38. | 'ಜನಪದಗೀತೆ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ರೈತನಿಗೆ ಬೇಸಾಯವು ಪ್ರಧಾನ ವೃತ್ತಿ. ಅವನ ಸುಖ-ಸಂತೋಷಗಳು ಮಳೆಯನ್ನಾಧರಿಸಿವೆ. ಮಳೆ ಬಾರದಿದ್ದರೆ ಆತ ದೇವರಲ್ಲಿ ಮೊರೆಯಿಡುವ ರೀತಿ ಮತ್ತು ಮಳೆ ಬಂದಾಗ ಆತನಿಗಾಗುವ ಸಂತಸ ಇವೆರಡೂ ಪ್ರಸ್ತುತ ಪದ್ಯಭಾಗದಲ್ಲಿ ವ್ಯಕ್ತವಾಗಿದೆ. ಮಳೆಬಾರದಿದ್ದಾಗ ರೈತನು ದೇವರನ್ನು ಕುರಿತು. "ಮಳೆ ಬಾರದೆ ಭೂಮಿ ಒಣಗಿದೆ. ಆಹಾರವಿಲ್ಲದೆ ದನಕರುಗಳು ಸೊರಗಿವೆ. ಆದುದರಿಂದ ಹೇ ಮಳೆರಾಯ, ಬೇಗ ಮಳೆ ಸುರಿದು ದನಕರುಗಳನ್ನು ಕಾಪಾಡು" ಎನ್ನುತ್ತಾನೆ. ಆಕಾಶದಲ್ಲಿ ಕಪ್ಪಾದ ಮೋಡ ನೋಡಿ ಇತರರನ್ನು ಕರೆದು ಹೀಗೆ ಹೇಳುತ್ತಾನೆ. ಮೂಡುತ್ತಿರುವ ಕರಿಮೋಡಗಳು ಗೋಡೆಗೆ ಕಪ್ಪು ಬಣ್ಣ ಬಳಿದಂತೆ ಅಂದವಾಗಿವೆ. ಮಳೆಸುರಿಸಲು ಅವು ಆಕಾಶದಲ್ಲಿ ಶಬ್ದಗೈಯುತ್ತಿವೆ ಎಂದು "ಸುರಿಯುವ ಮುತ್ತಿನಂತಹ ಸೋನೆ ಮಳೆಯೇ, ನೀನು ಭೈರವ ಬೆಟ್ಟದ ಮೇಲೆ ಜೋರಾಗಿ ಸುರಿ" ಎಂದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಮಳೆರಾಯನನ್ನೇ ಹುರಿದುಂಬಿಸುತ್ತಾನೆ. ಸ್ವಾತಿ ನಕ್ಷತ್ರದ ಮಳೆಯು ಸುರಿದಾಗ ಸಾವಿರಾರು ಕೆರೆಗಳು ತುಂಬುತ್ತವೆ. ಕುಣಿಗಲ್ ಕೆರೆಯಲ್ಲಿ 'ಕುಚ್ಚಲು' ಎಂಬ ಮೀನು ಅತ್ಯಂತ ಉತ್ಸಾಹದಿಂದ ಮೇಲಕ್ಕೆ ಹಾರುತ್ತಿರುತ್ತವೆ ಎಂದು ಜನಪದಗೀತೆ ಕವಿತೆಯಲ್ಲಿ ಬಣ್ಣಿಸಲಾಗಿದೆ. | |
| VII. | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | ಆರ್.ಎಸ್. ಸುಂಕದ<br>***ಉತ್ತರ :***<br>ಆರ್.ಎಸ್. ಸುಂಕದ ಅವರು ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಮೊರಬದಲ್ಲಿ ೧೯೫೧ ರಲ್ಲಿ ಜನಿಸಿದರು. ಇವರ ಕೃತಿಗಳು ಕನ್ನಡ ವ್ಯಾಕರಣ, ಗಂಗಾಧರ ಮಡಿವಾಳೇಶ್ವರ ತುರಮರಿ – ಒಂದು ಅಧ್ಯಯನ, ಮೊರಬ ಗ್ರಾಮದ ಸಾಂಸ್ಕೃತಿಕ ಅಧ್ಯಯನ, ಶ್ರೀ ಶಿಶುನಾಳ ಶರೀಫ ಸಾಹೇಬರ ಅನುಭಾವ ಗೀತ ಮಂಜರಿ. | |
| 40. | ಪ್ರೊ. ಕೆ.ಎಸ್. ನಿಸಾರ್ ಅಹಮದ್ :<br>***ಉತ್ತರ :***<br>ಪ್ರೊ॥ ಕೆ.ಎಸ್. ನಿಸಾರ್ ಅಹಮದ್ ಅವರು ೧೯೩೬ ರ ಫೆಬ್ರವರಿ ೫ ರಂದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ ಜನಿಸಿದರು. ಇವರ ಕೃತಿಗಳು – ಮನಸು ಗಾಂಧಿ ಬಜಾರು, ನೆನೆದವರ ಮನದಲ್ಲಿ, ಸುಮುಹೂರ್ತ, ಸಂಜೆ ಐದರ ಮಳೆ, ಸ್ವಯಂ ಸೇವೆಯ ಗಿಳಿಗಳು, ನಾನೆಂಬ ಪರಕೀಯ, ನಿತ್ಯೋತ್ಸವ, ಅನಾಮಿಕ ಆಂಗ್ಲರು, ನವೋಲ್ಲಾಸ, ಹಕ್ಕಿಗಳು, ಸಮಗ್ರ ಕವಿತೆಗಳು. | |
| VIII.<br>41. | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)**<br>ಶಕ್ತಿಗಿಂತ ಯುಕ್ತಿ ಮೇಲು.<br>**ಅಥವಾ**<br>ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ. | 1 × 3 = 3 |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IX. | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 1 × 4 = 4 |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 42. | ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದುದು ಹೇಗೆ ? ವಿವರಿಸಿ.<br><br>**ಅಥವಾ**<br><br>ಶಿವಾಜಿಯು ಮಲ್ಲಮ್ಮಾಜಿಯವರೊಂದಿಗೆ ರಾಜಿಮಾಡಿಕೊಂಡ ಸನ್ನಿವೇಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br><br>***ಉತ್ತರ :***<br><br>ಕರ್ನಾಟಕದಲ್ಲಿ ಕೆಚ್ಚೆದೆಯಿಂದ ಕತ್ತಿ ಝಳಪಿಸಿ, ವಿಜಯಿಗಳಾಗಿ ವಿಜೃಂಭಿಸಿದ ವೀರವನಿತೆಯರಲ್ಲಿ ಉಲ್ಲಾಳದ ವೀರರಾಣಿ ಅಬ್ಬಕ್ಕ ದೇವಿ ಒಬ್ಬಳು. ಒಮ್ಮೆ ಪೋರ್ಚುಗೀಸರು ಭಾರೀ ನೌಕೆಯಲ್ಲಿ ಬಲಾಢ್ಯ ಪಡೆಯೊಂದಿಗೆ ಆಕ್ರಮಣಕ್ಕೆ ಸಜ್ಜಾಗಿ ಉಲ್ಲಾಳದ ಕರಾವಳಿಯಲ್ಲಿ ಲಂಗರು ಹಾಕಿದರಂತೆ. ಆಗ ರಾಣಿ ಅಬ್ಬಕ್ಕ ದೇವಿಯ ಮೊಗೇರು ಎಂಬ ಮೀನುಗಾರ ಸಾಹಸಿ ಸೈನಿಕರು ಕರಾಳ ರಾತ್ರಿಯಲ್ಲಿ ಸದ್ದುಗದ್ದಲವಿಲ್ಲದೆ ನೂರಾರು ಸಣ್ಣ ದೋಣಿಗಳಲ್ಲಿ ಹೋಗಿ. ಸಾವಿರಾರು ತೆಂಗಿನ ಗರಿಯ ಉರಿಯುವ ದೀವಟಿಗೆಗಳನ್ನು ಕ್ಷಣಾರ್ಧದಲ್ಲಿ ಏಕಕಾಲಕ್ಕೆ ನೌಕೆಯ ಮೇಲೆ ಎಸೆದರಂತೆ. ಧಗಧಗನೆ ಉರಿಯುವ ನೌಕೆಯಿಂದ ದಿಕ್ಕೆಟ್ಟ ಪೋರ್ಚುಗೀಸ್ ಸೈನಿಕರು ಸಾವಿನಿಂದ ಪಾರಾಗಲು ಸಮುದ್ರಕ್ಕೆ ಹಾರಿದಾಗ, ಅಬ್ಬಕ್ಕದೇವಿಯ ಸೈನಿಕರ ಖಡ್ಗ, ಈಟಿಗಳಿಗೆ ಬಲಿಯಾದರು. ಹೀಗೆ ಪೋರ್ಚುಗೀಸರ ಹಡಗನ್ನು ಮುಳುಗಿಸಿ ಮಿರಾಂಡಾ ಮತ್ತು ಡಿ ಮೆಲ್ಲೊ ಎಂಬ ಸೇನಾಪತಿಗಳನ್ನು ಓಡಿಸಿ, ರಾಣಿ ಅಬ್ಬಕ್ಕದೇವಿಯು ಸಪ್ತ ಸಮುದ್ರದಾಚೆ ವಿಖ್ಯಾತಳಾದಳು.<br><br>**ಅಥವಾ**<br><br>ಪತಿಯ ಮರಣದಿಂದ ದುಃಖತಪ್ತಳಾದ ರಾಣಿ ಮಲ್ಲಮ್ಮಾಜಿಯು ಧೃತಿಗೆಡದೆ ಗಂಡನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಶಕ್ತಿಯ ಜೊತೆಗೆ ಯುಕ್ತಿಯಿಂದ ದಿಟ್ಟ ಹೆಜ್ಜೆ ಇಟ್ಟಳು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬೆಳವಡಿಯ ಸರದಾರ ಶಾಂತಯ್ಯನನ್ನು ಸಂನ್ಯಾಸಿಯ ವೇಷದಲ್ಲಿ ಶಿವಾಜಿಯ ಹತ್ತಿರ ಕಳುಹಿಸಿದಳು. ಅವನು "ಸಿದ್ಧ ಸಮುದ್ರದ ದ್ಯಾಮವ್ವ ಎಂಬ ಜಾಗೃತ ಜಗದಂಬೆ ದೇವಿಯ ದರ್ಶನ ಪಡೆದರೆ ಉತ್ತಮ" ಎಂದು ಶಿವಾಜಿಗೆ ತಿಳಿಸಿದನು. ಶಿವಾಜಿಯು ಅದಕ್ಕೊಪ್ಪಿದನು. ಇತ್ತ ರಾಣಿಯು ತನ್ನ ಪುಟ್ಟ ಮಗ ನಾಗಭೂಷಣನನ್ನು ಕರೆದುಕೊಂಡು, ಪತಿಯ ಕಿರೀಟಧರಿಸಿ, ಅರಸನ ಕುದುರೆ ಏರಿ, ಗುಪ್ತ ಮಾರ್ಗದಿಂದ ತನ್ನ ಸ್ತ್ರೀ ಸೈನ್ಯದೊಡನೆ ಮುನ್ನಡೆದಳು. ೮–೧೦ ಸರದಾರರೊಡನೆ ಜಗದಂಬೆಯ ದರ್ಶನ ಪಡೆದು ಮರಳುತ್ತಿದ್ದ ಶಿವಾಜಿಯ ಮೇಲೆ ಎರಗಿ, ಖಡ್ಗದಿಂದ ಅವರನ್ನೆಲ್ಲ ನೆಲಕ್ಕುರುಳಿಸಿದಳು. ಹಠಾತ್ತನೆ ದಾಳಿ ಮಾಡಿದ ರಾಣಿಯನ್ನು ಕಂಡು ಶಿವಾಜಿ ತಲ್ಲಣಗೊಂಡನು. ಕುದುರೆಯಿಂದ ಕೆಳಗಿಳಿದು ಕೈಜೋಡಿಸಿ, "ದೇವಿ, ನನ್ನ ಅಪರಾಧವನ್ನು ಕ್ಷಮಿಸು, ನಾನು ನಿನ್ನ ಮಗನೆಂದು ತಿಳಿ" ಎಂದು ಕೇಳಿಕೊಂಡನು. ರಾಣಿಯು ಶಿವಾಜಿಗೆ "ನನ್ನ ಪತಿಯನ್ನು ಕೊಂದು ಈಗ ಕ್ಷಮೆ ಯಾಚಿಸುತ್ತಿದ್ದೀರಾ ?" ಎಂದಳು. ಆಗ ಶಿವಾಜಿಯು "ಅದು ನನ್ನ ದುಷ್ಟ ಸರದಾರನ ಕೆಲಸ ಅದರಲ್ಲಿ ನನ್ನ ತಪ್ಪಿಲ್ಲ. ನಾನು ಕರ್ನಾಟಕಕ್ಕೆ ಬಂದು ದೊಡ್ಡ ತಪ್ಪು ಮಾಡಿದೆ" ಎಂದು ಒಪ್ಪಿಕೊಂಡನು. ಹೀಗೆ ಇಬ್ಬರೂ ರಾಜಿ ಮಾಡಿಕೊಂಡರು. | |
| X. | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | 1 × 4 = 4 |
| 43. | ಕಳಬೇಡ, ಕೊಲಬೇಡ, ........................................<br>....................................................................<br>....................................................................<br>....................................................................<br>........................................ ದೇವರನೊಲಿಸುವ ಪರಿ.<br><br>**ಅಥವಾ**<br><br>ದೇವಲೋಕ, ಮರ್ತ್ಯಲೋಕ ...................................<br>....................................................................<br>....................................................................<br>.............................................. ನೀವೇ ಪ್ರಮಾಣು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :***<br>ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ<br>ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ<br>ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ<br>ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ<br>ಇದೇ ಕೂಡಲ ಸಂಗಮದೇವರನೊಲಿಸುವ ಪರಿ.<br>**ಅಥವಾ**<br>ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ, ಕಾಣಿರೋ!<br>ಸತ್ಯವ ನುಡಿವುದೇ ದೇವ ಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ!<br>ಆಚಾರವೇ ಸ್ವರ್ಗ, ಅನಾಚಾರವೇ ನರಕ<br>ಕೂಡಲಸಂಗಮದೇವಾ ನೀವೇ ಪ್ರಮಾಣು. | |
| XI. | **ಪದ್ಯಭಾಗದ ಸಾರಾಂಶ ಬರೆಯುವುದು :** | 1 × 4 = 4 |
| | ವಿವರಣೆಗೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 44. | ಗೋಳಿಲ್ಲದ ಗುಂಡಿಲ್ಲದ<br>ನಾಡ ಕಟ್ಟತೇವ<br>ನೂರು ಮನಸಿನ<br>ಕೋಟಿ ಕನಸಿನ<br>ಹಾಡ ಕಟ್ಟತೇವ ನಾವು ನಾಡ ಕಟ್ಟುತೇವ ॥<br>***ಉತ್ತರ :***<br>ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವ ಅವಶ್ಯಕತೆಯನ್ನು ಪ್ರತಿಪಾದಿಸುತ್ತಾ ತಾರತಮ್ಯಗಳಿಲ್ಲದ ಸಮಾಜದ ನಿರ್ಮಾಣವೊಂದರ ಆಶಯವನ್ನು ಹೊತ್ತ 'ಕಟ್ಟತೇವ ನಾವು' ಕವಿತೆಯ ಸಾಲುಗಳು ಇವು. ಈ ಸಾಲುಗಳಲ್ಲಿ ಕವಿಯು ದುಃಖ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ದುಮ್ಮಾನಗಳಿಲ್ಲದ, ಹಿಂಸೆಗೆ ಎಡೆಯಿರದ ನಾಡನ್ನು ಕಟ್ಟುತ್ತೇವೆ. ಭರವಸೆಯ ಕೋಟಿ ಕೋಟಿ ಕನಸನ್ನು ಕಾಣುವ ನೂರಾರು ಮನಸ್ಸಿನ ಹಾಡುಗಳನ್ನು ಕಟ್ಟುತ್ತೇವೆ ಹಾಗೂ ಅಂತಹ ಒಂದು ಸುಂದರ ನಾಡನ್ನು ಕಟ್ಟುತ್ತೇವೆ ಎಂದು ಸಾರಿದ್ದಾರೆ. | |
| XII. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | **(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | 1 × 5 = 5 |
| | 'ನಗು' ಎಂಬುದು ಮಾನವನ ಸಹಜವಾದ ಧರ್ಮ. ನಗೆಯನ್ನು ಸ್ಥೂಲವಾಗಿ ಎರಡು ಬಗೆಯಾಗಿ ವಿಂಗಡಿಸಬಹುದು – ಮೆಚ್ಚುನಗೆ ಮತ್ತು ಚುಚ್ಚುನಗೆ. ಬುದ್ಧನ ಮುಗುಳುನಗೆ, ಶ್ರೀಕೃಷ್ಣನ ಸರಸನಗೆ, ಪಂಪ ಕವಿಯ ರಸನಗೆಗಳಲ್ಲಿ ಮಾಧುರ್ಯವಿದೆ. ಅದನ್ನು ಜನತೆ ಮೆಚ್ಚುತ್ತದೆ. ಎಲ್ಲರೂ ಮೆಚ್ಚುವ ನಗೆಯೇ ಮೆಚ್ಚುನಗೆ. ಅನ್ಯರ ಮನಕ್ಕೆ ನೋವಾಗುವಂತೆ ನಗುವುದು ಚುಚ್ಚುನಗೆ. ನಯಸೇನನ ಮೂದಲಿಕೆ, ತೆನಾಲಿರಾಮನ ಕುಚೇಷ್ಟೆಯ ನಗೆಗಳಲ್ಲಿ ಒರಟುತನ ಹೆಚ್ಚು. ಮುಗ್ಧನಗೆಯಿಂದ ಎಲ್ಲರ ಬಾಳು ಹಗುರಾಗುತ್ತದೆ. ನಕ್ಕಾಗ ಮುಖ ಅರಳುತ್ತದೆ. "ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ" ಎಂದು ಸರ್ವಜ್ಞ ಹೇಳಿದ್ದಾನೆ. ಅದರಂತೆ ಎಲ್ಲರೂ ಸರಸವಾದ ಮಾತನಾಡಿ ಇತರರನ್ನು ನಗಿಸಿ, ತಾವೂ ನಕ್ಕು ಬಾಳಬೇಕು. | |
| 45. | ಎ) ಮಾನವನ ಸಹಜವಾದ ಧರ್ಮ ಯಾವುದು ? | |
| | ***ಉತ್ತರ :*** ಮಾನವನ ಸಹಜವಾದ ಧರ್ಮ ನಗು. | |
| | ಬಿ) ನಗೆಯ ಎರಡು ಬಗೆಗಳನ್ನು ಹೆಸರಿಸಿ. | |
| | ***ಉತ್ತರ :*** ನಗೆಯ ಎರಡು ಬಗೆಗಳು ಮೆಚ್ಚುನಗೆ ಮತ್ತು ಚುಚ್ಚುನಗೆ. | |
| | ಸಿ) ಯಾರ್‍ಯಾರ ನಗೆಗಳಲ್ಲಿ ಮಾಧುರ್ಯವಿದೆ ? | |
| | ***ಉತ್ತರ :*** ಬುದ್ಧನ ಮುಗುಳುನಗೆ, ಶ್ರೀಕೃಷ್ಣನ ಸರಸನಗೆ ಹಾಗೂ ಪಂಪ ಕವಿಯ ರಸನಗೆಗಳಲ್ಲಿ ಮಾಧುರ್ಯವಿದೆ. | |
| | ಡಿ) ತೆನಾಲಿರಾಮನ ನಗೆ ಎಂತಹದ್ದು ? | |
| | ***ಉತ್ತರ :*** ತೆನಾಲಿರಾಮನ ನಗೆ ಕುಚೇಷ್ಟೆಯದ್ದು. | |
| | ಇ) ಎಲ್ಲರೂ ಹೇಗೆ ಬಾಳಬೇಕು ? | |
| | ***ಉತ್ತರ :*** ಎಲ್ಲರೂ ಸರಸವಾದ ಮಾತನಾಡಿ ಇತರರನ್ನು ನಗಿಸಿ, ತಾವೂ ನಕ್ಕು ಬಾಳಬೇಕು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XIII. | **ಪ್ರಬಂಧ ಬರೆವಣಿಗೆ :** | 1 × 5 = 5 |
| 46. | ಸಂಪರ್ಕ ಮಾಧ್ಯಮಗಳ ಉಪಯೋಗ ಹಾಗೂ ದುಷ್ಪರಿಣಾಮಗಳು.<br>**ಅಥವಾ**<br>ಪರಿಸರ ಮಾಲಿನ್ಯದ ತಡೆಗಟ್ಟುವಿಕೆ. | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 2 ಅಂಕಗಳು |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| XIV. | **ಪತ್ರ ಲೇಖನ ಬರೆಯುವುದು :** | 1 × 5 = 5 |
| 47. | ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ 'ನವೀನ' ಎಂದು ಭಾವಿಸಿಕೊಂಡು, ಅಣ್ಣನ ಮದುವೆಯ ಕಾರಣ ನೀಡಿ, ಮೂರು ದಿನಗಳ ರಜೆಯನ್ನು ನೀಡುವಂತೆ ಕೋರಿ, ಮುಖ್ಯೋಪಾಧ್ಯಾಯರಿಗೆ ಒಂದು ರಜಾ ಅರ್ಜಿಯನ್ನು ಬರೆಯಿರಿ.<br>**ಅಥವಾ**<br>ನಿಮ್ಮನ್ನು ಹಾಸನದ ಮುರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿಯಾದ 'ನವನೀತ' ಎಂದು ಭಾವಿಸಿಕೊಂಡು, ನಿಮ್ಮ ಶೈಕ್ಷಣಿಕ ಪ್ರಗತಿಯ ಬಗ್ಗೆ ವಿವರಿಸುತ್ತ 'ಉಡುಪಿ'ಯಲ್ಲಿರುವ ನಿಮ್ಮ ಗೆಳೆಯನಿಗೆ ಒಂದು ಪತ್ರವನ್ನು ಬರೆಯಿರಿ.<br>ವ್ಯಾವಹಾರಿಕ ಪತ್ರ *:* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ**<br>ವೈಯಕ್ತಿಕ ಪತ್ರ *:* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |